**ದಿನಾಂಕಃ 11-03-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ವಾದಿಗಳ ಪರ ಶ್ರೀ ವೈ.ಹೆಚ್.ಕೆ. ವಕೀಲರಿಂದಃ**

ನನಗೆ ವಾದಿ ಮತ್ತು ಪ್ರತಿವಾದಿಯರು 45 ವರ್ಷಗಳಿಂದ ಪರಿಚಯವಿರುತ್ತಾರೆ. ನಮ್ಮ ಮನೆ ವಾದಿ ಮತ್ತು ಪ್ರತಿವಾದಿಯರ ಮನೆ ಪಕ್ಕದಲ್ಲಿರುವುದಿಲ್ಲ ಸ್ವಲ್ಪ ದೂರದಲ್ಲಿದೆ. ನಮ್ಮ ಮನೆ 1 ನೇ ಪ್ರತಿವಾದಿಯ ಮನೆ ಪಕ್ಕದಲ್ಲಿದೆ. ನಾನು ನಮ್ಮ ಊರಿನ ಜಮಾತಿನಲ್ಲಿ ನಾನು ಮತ್ತು 1 ನೇ ಪ್ರತಿವಾದಿ ಸದಸ್ಯನಿದ್ದೇನು. ಆ ಕಾರಣಕ್ಕೆ ನನ್ನ ಮತ್ತು 1 ನೇ ಪ್ರತಿವಾದಿಯ ಮದ್ಯೆ ಒಳ್ಳೆಯ ಸಂಬಂದ ಇದೆ ಎಂದರೆ ಸರಿ. 1 ನೇ ಪ್ರತಿವಾದಿ ನನಗೆ ಬೇಕಾದ ರೀತಿಯಲ್ಲಿ ಸಾಕ್ಷಿ ಹೇಳು ಎಂದು ಕರೆದಿದ್ದಕ್ಕೆ ಬಂದು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಿನ ನನ್ನನ್ನು 1 ನೇ ಪ್ರತಿವಾದಿ ಕರೆದುಕೊಂಡು ಬಂದಿದ್ದಾನೆ ಎಂದರೆ ಸರಿ. ಈಗ 15 ವರ್ಷಗಳ ಹಿಂದೆ ನನಗೆ ವಾದಿ ಮತ್ತು ಪ್ರತಿವಾದಿಯರ ಪರಿಚಯವಿದೆ. ಅದರ ಹಿಂದೆ ಅವರ ಕುಟುಂಬದಲ್ಲಿ ಎನು ನಡೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಎನು ಬರೆದಿದೆ ಎಂದು ಗೊತ್ತಿಲ್ಲ.

2. ಖಾಸಿಂ ಸಾಬ್ ಆಸ್ತಿ ಖರೀದಿ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ಖಾಸಿ ಸಾಬ್ ಇವರು ತೀರಿಕೊಂಡ ನಂತರ ಆಸ್ತಿಗಳನ್ನು ಮಾರಾಟ ಮಾಡಿ ಮದುವೆ ಮಾಡಿರುವುದು ನನಗೆ ಗೊತ್ತಿಲ್ಲ. ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದು ಗೊತ್ತು. ಯಾವ ಆಸ್ತಿ, ಯಾರಿಗೆ ಮಾರಿದ್ದಾರೆ ಎಂದರೆ ಗೊತ್ತಿಲ್ಲ. 1986 ರಲ್ಲಿ ವಾಟ್ನಿ ಮಾಡಿಕೊಂಡಿರುವ ವಿಚಾರ ನನಗೆ ಗೊತಿಲ್ಲ ಆ ಪ್ರಕಾರ ಯಾರಿಗೆ ಯಾವ ಆಸ್ತಿಗಳು ಹೋಗಿವೆ ಎಂದು ಗೊತ್ತಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ವಾಟ್ನಿಯಾಗಿದೆ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ತಾಯಿ ಯಾವಾಗ ತೀರಿಕೊಂಡಿದ್ದಾಳೆ ಎಂದು ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ಯಾರಾ ನಂ.7 ರಲ್ಲಿರುವ ವಿಷಯಗಳು ನನಗೆ ಮಾಹಿತಿ ಇಲ್ಲ. ನಾವು ಮನೆ ಖಾಲಿ ಮಾಡಿ ಕೊಡಿ ಎಂದು ಪಂಚಾಯಿತಿ ಮಾಡಿಲ್ಲ.

3. ಹೈವೆ ಹತ್ತಿರ ಇರುವ ಕೆಂಪು ಹಂಚಿನ ಮನೆಯಲ್ಲಿ ವಾದಿ ಇರುತ್ತಾರೆ ಎಂದರೆ ಸರಿ. ಅವರು ಎಷ್ಟು ವರ್ಷದಿಂದ ಇದ್ದಾರೆ ಎಂದು ಮಾಹಿತಿ ಇಲ್ಲ. 1 ನೇ ಪ್ರತಿವಾದಿಯ ಮಾತು ಕೇಳಿ ಆಸ್ತಿಯ ಬಗ್ಗೆ ಮತ್ತು ಕುಟುಂಬದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಒಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-

(ಜೆ.ವಿ.ಕುಲಕರ್ಣಿ)

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.